# ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆ: 370/2021

ಚಾ.ಸಾ-9 ಪ್ರಾ.ಸಾ-1

ದಿಃ 20.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಸಿ. ನಿಜಲಿಂಗಪ್ಪ |
| ತಂದೆ ಹೆಸರು | ಚಿಕ್ಕಪ್ಪ |
| ವಯಸ್ಸು | 64 ವರ್ಷ |
| ವೃತ್ತಿ | ನಿವೃತ್ತ ಪಿ.ಎಸ್.ಐ. |
| ವಿಳಾಸ | ಲಗ್ಗೆರೆ, ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು ದಿಃ 5.9.2016 ರಿಂದ ದಿಃ 31.5.2021 ರವರೆಗೆ ಕಾಟನ್ ಪೇಟೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 22.7.2019 ರಂದು ಬೆಳಿಗ್ಗೆ 6.20ರ ವೇಳೆಗೆ ನಾನು ಠಾಣೆಯ ಪ್ರಭಾರದಲ್ಲಿದ್ದಾಗ ಚಾ.ಸಾ-1 ಮತ್ತು ಅವರ ಸಿಬ್ಬಂದಿಯವರು 5 ಜನ ಆರೋಪಿಗಳು ಹಾಗು ಅಮಾನತುಪಡಿಸಿಕೊಂಡ ಸ್ವತ್ತುಗಳೊಂದಿಗೆ ಠಾಣೆಗೆ ಬಂದು ಅವರನ್ನು ನನ್ನ ಮುಂದೆ ಹಾಜರುಪಡಿಸಿ ಮುಂದಿನ ಕ್ರಮಕ್ಕಾಗಿ ಒಂದು ವರದಿಯನ್ನು ನೀಡಿರುತ್ತಾರೆ. ಈಗ ನನಗೆ ತೋರಿಸಿರುವ ದಾಖಲೆಯು ಸಂಬಂಧಿತ ವರದಿಯಾಗಿದೆ. ಇದನ್ನು ನಿ.ಪಿ-1 ಎಂದು

ಗುರುತಿಸಲಾಯಿತು. ಇದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು.

3. ನಾನು ಸದರಿ ವರದಿಯಂತೆ ಮೊಕದ್ದಮೆ ಸಂಖ್ಯೆ 148/2019ರಲ್ಲಿ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ರವಾನಿಸಿರುತ್ತೇನೆ. ಈಗ ನನಗೆ ತೋರಿಸಿರುವ ದಾಖಲೆಯು ಸಂಬಂಧಿತ ಪ್ರಥಮ ವರ್ತಮಾನ ವರದಿಯಾಗಿದೆ. ಇದನ್ನು ನಿ.ಪಿ-2 ಎಂದು ಗುರುತಿಸಲಾಯಿತು.

4. ಚಾ.ಸಾ-1 ರವರು ನನ್ನ ಮುಂದೆ ಹಾಜರುಪಡಿಸಿದ್ದ ಸ್ವತ್ತುಗಳ ಬಗ್ಗೆ ಸ್ವತ್ತಿನ ಪಟ್ಟಿ ಸಂಖ್ಯೆ 73/2019ರಲ್ಲಿ ನಮೂದಿಸಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈಗ ನನಗೆ ತೋರಿಸಿರುವ ದಾಖಲೆಯು ಸದರಿ ಸ್ವತ್ತಿನ ಪಟ್ಟಿ ಆಗಿದೆ. ಇದನ್ನು ನಿ.ಪಿ-3 ಎಂದು ಗುರುತಿಸಲಾಯಿತು. ಇದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು.

5. ಆ ಕಾಲಕ್ಕೆ ಚಾ.ಸಾ-1 ರವರು ಸಂಬಂಧಿತ ಪಂಚನಾಮೆಯನ್ನು ಹಾಜರುಪಡಿಸಿದ್ದರು. ಈಗ ನನಗೆ ತೋರಿಸಿರುವ ದಾಖಲೆಯು ಸದರಿ ಪಂಚನಾಮೆ ಆಗಿದೆ. ಇದನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಇದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು.

6. ಚಾ.ಸಾ-1 ರವರು ನನ್ನ ಮುಂದೆ ಹಾಜರುಪಡಿಸಿದ್ದ ಸ್ವತ್ತುಗಳನ್ನು ಗುರುತಿಸಬಲ್ಲೆ. ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಸೀಲು ಮಾಡಲಾದ ಸ್ಥಿತಿಯಲ್ಲಿದ್ದ ಸ್ವತ್ತುಗಳನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸಂಬಂಧಿತ ಸ್ವತ್ತುಗಳು ಎಂದು ಗುರುತಿಸಿರುವ ಒಂದು ಚಾಕು, ಎರಡು ದೊಣ್ಣೆ , ಒಂದು ರಾಡ್ ಮತ್ತು ಖಾರದಪುಡಿ ಪೊಟ್ಟಣವನ್ನು ಕ್ರಮವಾಗಿ ಮು.ಮಾ-1 ರಿಂದ ಮು.ಮಾ-5 ಎಂದು ಗುರುತಿಸಲಾಯಿತು.

7. ನಾನು ಅದೇ ದಿನದಂದು ನನ್ನ ಮುಂದೆ ಹಾಜರುಪಡಿಸಲಾದ ಆರೋಪಿಗಳನ್ನು ದಸ್ತಗಿರಿ ಮಾಡಿ ಅವರನ್ನು ವಿಚಾರಣೆಗೆ ಒಳಪಡಿಸಿ ಅವರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಸದರಿ ಆರೋಪಿಗಳನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಾನು ಅದೇ ದಿನದಂದು ಚಾ.ಸಾ-4 ರಿಂದ ಚಾ.ಸಾ-8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

8. ಬಳಿಕ ನಾನು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ. ನಾನು ಈ ಪ್ರಕರಣದ ಆರೋಪಿಗಳನ್ನು ಗುರುತಿಸಬಲ್ಲೆ.

ಆರೋಪಿಗಳ ಪರ ವಕೀಲರುಗಳು ಗೈರುಹಾಜರಾಗಿರುತ್ತಾರೆ. ಆರೋಪಿಗಳು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಸಮಯಾವಕಾಶವನ್ನು ಕೋರಿರುತ್ತಾರೆ. ಆರೋಪಿಗಳು ಸಾಕ್ಷಿಯ ಖರ್ಚನ್ನು ಭರಿಸಬೇಕು ಎನ್ನುವ ಷರತ್ತಿನೊಂದಿಗೆ ಪಾಟೀಸವಾಲನ್ನು ಮುಂದೂಡಲಾಗಿದೆ.

ಫ್ರಾ.ಸಾ-1

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.